S C.R.P.67

| Form No.4<br>(Criminal)<br>Deposition<br>Sheets<br>(R.P.No.57) |
|---|

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್ಃ 256/2019

ಚಾ.ಸಾ.-29 ಪ್ರಾ.ಸಾ.-16

| | |
|---|---|
| ಸಾಕ್ಷಿದಾರರ ಹೆಸರು | ಪಂಪಾಶ್ರೀ |
| ಗಂಡನ ಹೆಸರು | ಶ್ರೀಧರ್ |
| ವಯಸ್ಸು | 42 ವರ್ಷಗಳು |
| ಉದ್ಯೋಗ | ಪೌರಾಯುಕ್ತರು , ನಗರಸಭೆ, ಮಂಡ್ಯ |
| ವಾಸ | ಮಂಡ್ಯ |

**ದಿನಾಂಕಃ 23.03.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) 2016 ರಿಂದ 2022 ರವರೆಗೆ ನಾನು ಮಂಡ್ಯ ನಗರಸಭೆಯ ಕಂದಾಯ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ದಿನಾಂಕಃ 31.08.2019 ರಂದು ಈ ಪ್ರಕರಣದ ತನಿಖಾಧಿಕಾರಿಗಳು ಮಂಡ್ಯ ನಗರಸಭೆಯ ವಾರ್ಡ್ ನಂ. 13 ರ ಸ್ವತ್ತು ಸಂಖ್ಯೆ 13-2-134-70ಎ ರ ಮನೆಯ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ವಾರಸುದಾರರ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ಹಾಗೂ ಸದರಿ ಸ್ವತ್ತಿನ ಕರ ನಿರ್ಧರಣಾ ಪತ್ರವನ್ನು ದೃಡೀಕರಿಸಿ ನೀಡುವಂತೆ ಎರಡು ಕೋರಿಕೆಗಳನ್ನು ನೀಡಿದ್ದರು. ಸದರಿ ಕೋರಿಕೆಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ **ನಿಪಿ- 39 ಮತ್ತು ನಿಪಿ- 40** ಎಂದು ಗುರುತಿಸಲಾಗಿದೆ.

3) ದಿನಾಂಕಃ 21.10.2019 ರಂದು ರಾಜಸ್ವ ನಿರೀಕ್ಷಕರು ಮತ್ತು ಕರ ವಸೂಲಿಗಾರರು ಸ್ಥಳ ಪರಿಶೀಲಿಸಿ ನೀಡಿರುವ ವರದಿಯನ್ನು ಆಧಾರಿಸಿ ಮಾಹಿತಿಯನ್ನು ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಅದರಂತೆ ಸದರಿ ಸ್ಥಳದಲ್ಲಿ ಪುಟ್ಟಮಾದಯ್ಯ ಬಿನ್

ಲೇಟ್ ಕಾಳಯ್ಯರವ ಕುಟುಂಬ ವಾಸವಾಗಿರುತ್ತದೆ. ಮತ್ತು ಸದರಿ ನಿವೇಶನ ಮಂಡ್ಯ ನಗರಸಭೆ ವಾರ್ಡ್ ನಂ. 13, 6 ನೇ ಕ್ರಾಸ್ ಮನೆ ನಂ. 381 ಆಗಿರುತ್ತದೆ. ಈ ಬಗ್ಗೆ ಮಾಹಿತಿಯನ್ನು ತನಿಖಾಧಿಕಾರಿಗಳಿಗೆ ನೀಡಿದ್ದನ್ನು ಈಗ ನೋಡುತ್ತಿದ್ದು **ನಿಪಿ- 41** ಎಂದು ಅದರಲ್ಲಿರುವ ಸಹಿಯನ್ನು **ನಿಪಿ- 41(ಎ)** ಎಂದು ಗುರುತಿಸಲಾಗಿದೆ.

4) ಸದರಿ ಸ್ವತ್ತಿಗೆ ಸಂಬಂಧಪಟ್ಟ ಕರ ನಿರ್ಧರಣಾದ ಬಗ್ಗೆ ಕಚೇರಿಯಲ್ಲಿರುವ ಆರಸ್ತಿ ತೆರಿಗೆ ಬೇಡಿಕೆ ವಹಿಯ ಉದ್ರಿತ ಭಾಗದ ಯಥಾ ನಕಲನ್ನು ದೃಡೀಕರಿಸಿ ಕವಚ ಪತ್ರದೊಂದಿಗೆ ನೀಡಿರುತ್ತೇನೆ. ಅವುಗಳನ್ನು ಈಗ ನೋಡುತ್ತಿದ್ದು ಅವುಗಳನ್ನು **ನಿಪಿ- 42 ಮತ್ತು ನಿಪಿ- 43** ಎಂದು ಅದರಲ್ಲಿರುವ ಸಹಿಯನ್ನು **ನಿಪಿ- 42(ಎ)** ಮತ್ತು **ನಿಪಿ- 43(ಎ)**ಎಂದು ಗುರುತಿಸಲಾಗಿದೆ.

**5)** ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ವಾರಸುದಾರರ ದಾಖಲೆಗಳಿಗೆ ಸಂಬಂಧಪಟ್ಟಂತೆ ಸದರಿ ಸ್ವತ್ತು ನಗರಸಭೆಯಿಂದ ಹಂಚಿಕೆಯಾಗಿ ಇತರರ ಖಾತೆಯಾಗಿರುವ ಆಸ್ತಿಯಾಗಿದ್ದು ಮೂಲ ವಾರಸುದಾರರು 1978-79 ನೇ ಸಾಲಿನ ಅಸೆಸ್ ಮೆಂಟ್ ವಹಿಯಂತೆ ಕೆ. ವಿ. ನಾಗಪ್ಪರವರ ಹೆಸರಿನಲ್ಲಿ ನಮೂದಾಗಿದ್ದು ನಂತರ ಪುಟ್ಟಮಾದಯ್ಯ ಬಿನ್ ಲೇಟ್ ಕಾಳಯ್ಯ ರವರ ಹೆಸರಿನಲ್ಲಿ ಯಾವುದೇ ದಾಖಲೆ ಇರುವುದಿಲ್ಲ ಎಂದು ಕಂಡುಬರುತ್ತದೆ. ಸದರಿ ಸ್ವತ್ತಿನ ಪ್ರಸ್ತುತ ಖಾತೆದಾರರು ಎಚ್ ಎಂ ಶಶಿಧರ ಬಿನ್ ಲೇಟ್ ಮರೀಗೌಡ ನಮ್ಮ ಕಚೇರಿಯ ಕೆ ಎಂ ಎಫ್ 24 ವಹಿಯಲ್ಲಿ ದಾಖಲಾಗಿರುವುದು ಕಂಡುಬರುತ್ತದೆ. ಸದರಿ ದಾಖಲೆಗಳ ದೃಡೀಕೃತ ನಕಲುಗಳನ್ನು ಸಹ ಕವಚ ಪತ್ರದೊಂದಿಗೆ ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಅವುಗಳನ್ನು **ನಿಪಿ- 44, ನಿಪಿ- 45 ಮತ್ತು ನಿಪಿ- 46** ಎಂದು, ಅದರಲ್ಲಿರುವ ಸಹಿಗಳನ್ನು **ನಿಪಿ- 44(ಎ) , 45(ಎ) ಮತ್ತು ನಿಪಿ- 46(ಎ)**ಎಂದು ಗುರುತಿಸಲಾಗಿದೆ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಎಚ್ ಡಿ ಆರ್ ವಕೀಲರಿಂದಃ**

6) ತನಿಖಾಧಿಕಾರಿಗಳ ಕೋರಿಕೆ ಪತ್ರದನ್ವಯ ನಮ್ಮ ಕಚೇರಿಯಲ್ಲಿ ನಾನು ಪರಿಶೀಲನೆ ಮಾಡಿದಾಗ ಸದರಿ ಸ್ವತ್ತಿನ ಪ್ರಸ್ತುತ ಮಾಲೀಕರು ಶ್ರೀ. ಎಚ್ ಎಮ್ ಶಶಿಧರ ಬಿನ್ ಲೇಟ್ ಮರೀಗೌಡ ಎಂದು ಕಂಡು ಬರುತ್ತದೆ. ನಮ್ಮ ಕಚೇರಿಯ ದಾಖಲೆಗಳಂತೆ ಅಲ್ಲಿಯವರೆಗಿನ ಕರ ವಸೂಲಿ ಆಗಿರುವ ಬಗ್ಗೆ ಕಂಡುಬರುತ್ತದೆ. ಪುಟ್ಟಮಾದಯ್ಯ ಬಿನ್ ಲೇಟ್ ಕಾಳಯ್ಯ ಇವರ ಹೆಸರಿನಲ್ಲಿ ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ

ದಾಖಲೆಗಳು ನಮ್ಮ ಕಚೇರಿಯಲ್ಲಿ ಕಂಡುಬಂದಿರುವುದಿಲ್ಲ. ನಾನು ಖುದ್ದಾಗಿ ಸ್ಥಳ ಪರಿಶೀಲನೆ ಮಾಡಿರುವುದಿಲ್ಲ. ಸದರಿ ಸ್ವತ್ತಿನಲ್ಲಿರುವ ಮನೆ ನಂ. 381 ನಗರ ಸಭೆಯಿಂದ ಪುಟ್ಟಮಾದಯ್ಯ ಬಿನ್ ಕಾಳಯ್ಯರವರ ಹೆಸರಿಗೆ ಹಂಚಿಕೆಯಾಗಿರುವುದಿಲ್ಲ. ನಮ್ಮ ಕಚೇರಿಯಲ್ಲಿ ಇರುವ ಎಲ್ಲಾ ದಾಖಲೆಯನ್ನು ಪರಿಶೀಲಿಸಿದಾಗ ಸದರಿ ಸ್ವತ್ತಿನಲ್ಲಿ ತಾತ್ಕಾಲಿಕವಾಗಿ ಶೆಡ್ ನಿರ್ಮಾಣ ಮಾಡಿಕೊಂಡು ಪುಟ್ಟಮಾದಯ್ಯ ಬಿನ್ ಕಾಳಯ್ಯರವರು ಅನಧಿಕೃತವಾಗಿ ವಾಸವಾಗಿರುತ್ತಾರೆ ಎಂದು ಸ್ಥಳ ಪರಿಶೀಲನಾ ವರದಿಯಿಂದ ಮನವರಿಕೆಯಾಗಿರುತ್ತದೆ. ಶಶಿಧರ್ ಬಿನ್ ಮರೀಗೌಡರವರು ನಗರಸಭೆಗೆ ಅನಧಿಕೃತವಾಗಿ ವಾಸವಾಗಿರುವುದನ್ನು ತೆರವುಗೊಳಿಸಬೇಕೆಂದು ಅನೇಕ ಅರ್ಜಿಗಳನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ, ಮಂಡ್ಯ